


# ಮಂಗಳೂರಿನಲ್ಲಿ 'ಭಾವಸಂಗಮ – ಭಕ್ತಸಮಾಗಮ'

ನವಂಬರ್ ೪ ರಿಂದ ೬ರ ವರೆಗೆ ಮಂಗಳೂರು ರಾಮಕೃಷ್ಣ ಮಠದಲ್ಲಿ ನಡೆದ ಮೂರು ದಿನಗಳ '**ಭಾವಸಂಗಮ – ಭಕ್ತ ಸಮಾಗಮ**' ಆಧ್ಯಾತ್ಮಿಕ ಶಿಬಿರವು ವಾರ್ಷಿಕೋತ್ಸವದೊಂದಿಗೆ ಸಂಗಮಗೊಂಡು, ವಿಶಿಷ್ಟ ಕಾರ್ಯಕ್ರಮವಾಗಿ ರೂಪ ಪಡೆತು. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲನಾಥಾನಂದ ಸ್ವಾಮೀಜಿಯವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ, ಕೊಯಮತ್ತೂರು ರಾಮಕೃಷ್ಣ ಮಿಷನ್ ವಿದ್ಯಾಲಯದ ಅಧ್ಯಕ್ಷರೂ ಆದ ಸ್ವಾಮಿ ಅಭಿರಾಮಾನಂದಜಿ ಅಧ್ಯಕ್ಷತೆ ವಹಿಸಿದರು. ರಾಮಕೃಷ್ಣ ಮಹಾಸಂಘದ ಸ್ವಾಮಿ ನಿತ್ಯಸ್ಥಾನಂದಜಿ, ಅನುಪಮಾನಂದಜಿ, ಸ್ವಾತ್ಮಾರಾಮಾನಂದಜಿ, ತ್ಯಾಗೀಶ್ವರಾನಂದಜಿ, ಯುಕ್ತೇಶಾನಂದಜಿ ಹಾಗೂ ರಾಣೆಬೆನ್ನೂರು ರಾಮಕೃಷ್ಣ–ವಿವೇಕಾನಂದ ಆಶ್ರಮದ ಸ್ವಾಮಿ ಪ್ರಕಾಶಾನಂದಜಿಯವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು. **ದಿವ್ಯತ್ರಯಧಾರೆ, ಅಧ್ಯಾತ್ಮಧಾರೆ, ಶಾಸ್ತ್ರ–ಕಾವ್ಯ ಧಾರೆ** ಎಂಬ ಮೂರು ಪರಿಕಲ್ಪನೆಗಳಿಂದ ಕೂಡಿದ ಒಟ್ಟು ಒಂಬತ್ತು ಗೋಷ್ಠಿಗಳಲ್ಲಿ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ಹಾಗೂ ನಾಡಿನ ಪ್ರಖ್ಯಾತ ಚಿಂತಕರು ಪ್ರವಚನ–ಭಾಷಣ ಮಾಡಿದರು. ಇದರೊಂದಿಗೆ ಪ್ರಶ್ನೋತ್ತರ, ಸಂವಾದ, ಭಜನೆ, ಸಂಕೀರ್ತನೆಗಳು ನಡೆದವು. ಮೊದಲ ದಿನ ಶ್ರೀ ದತ್ತಾತ್ರೇಯ ವೇಲಂಕರ್ ಅವರಿಂದ **ದಿವ್ಯತ್ರಯರ ಗಾನಾಮೃತ–ಭಕ್ತಿಸಂಗೀತ,** ಶ್ರೀ ದಾಮೋದರ್ ರಾಮದಾಸಿ, ಪುಣೆ ಅವರಿಂದ '**ಯೋಧ ಸಂನ್ಯಾಸಿ ಸ್ವಾಮಿ ವಿವೇಕಾನಂದ**' ಹಿಂದೀ ಏಕಪಾತ್ರಾಭಿನಯ, ಎರಡನೆಯ ದಿನ ಸ್ವಾಮಿ ಸ್ವಾತ್ಮಾರಾಮಾನಂದಜಿಯವರಿಂದ **ಉಷಾಕೀರ್ತನೆ,** ಸ್ವಾಮಿ ಸತ್ವಸ್ಥಾನಂದಜಿಯವರಿಂದ **ಭಗವನ್ನಾಮ ಸಂಕೀರ್ತನೆ,** ಉಸ್ತಾದ್ ಫಯಾಜ್ ಖಾನ್ ಅವರಿಂದ **ಭಜನ್ ಸಂಧ್ಯಾ** ನಡೆಯಿತು. ಸಮಾರೋಪ ಸಮಾರಂಭ ದಲ್ಲಿ ನಿಟ್ಟೆ ವಿಶ್ವವಿದ್ಯಾನಿಲಯದ ಕುಲಾಧಿ ಪತಿಗಳಾದ ಶ್ರೀ ವಿನಯ್ ಹೆಗ್ಡೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗಣೇಶ್ ಕಾರ್ಣಿಕ್ ಅವರು ಭಾಗವಹಿಸಿದ್ದರು.

ಕರ್ನಾಟಕದ ಎಲ್ಲೆಡೆಗಳಿಂದ ಬಂದಿದ್ದ ಸುಮಾರು ೧೦೦೦ ಮಂದಿ ಭಕ್ತರುಗಳು ಈ ಕಾರ್ಯಕ್ರಮದ ಪ್ರತಿನಿಧಿಯಾಗಿ ಭಾಗವಸಿದರು. ಎಲ್ಲ ಪ್ರತಿನಿಧಿಗಳು ಹಾಗೂ ಭಕ್ತರು ಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡಲಾಗಿತ್ತು. ಸುಮಾರು ೬೦೦ ಮಂದಿ ಪ್ರತಿನಿಧಿಗಳಿಗೆ ವಸತಿ ಸೌಕರ್ಯವನ್ನು ಕೂಡ ಒದಗಿಸಿಕೊಡಲಾಗಿತ್ತು.







Managing Editor : Swami Atmajnananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020